

# ಮನಸೊಳಗೆ ಬೆಳೆಯುವ ನೇಲ್ ಪಾಲಿಶ್

**ಎದೆಗೆ ಚೂರಿ ನಾಟಿದೆ. ರಕ್ತ ಹರಿಯುತ್ತಿದೆ. ಅವಳು ಹಾಗೆ ಗುನುಗುತ್ತಲೇ ಬಂದು ಕೂತು ಆ ರಕ್ತದಲ್ಲಿ ಕುಂಚವನ್ನು ಅದ್ದಿ ಕಾಲಿಗೆ ನೇಲ್ ಪಾಲಿಶ್ ರೀತಿ ಹಚ್ಚಿಕೊಳ್ಳಲು ಶುರುಮಾಡುತ್ತಾಳೆ.**

■ ಗೌರಿ

ಕಥೆಯ ಎಲ್ಲ ವಿವರಗಳನ್ನೂ ಪರದೆಯ ಮೇಲೆ ಕಾಣಿಸುವುದು ಪ್ರೇಕ್ಷಕನ ಸಾಮರ್ಥ್ಯದ ಬಗ್ಗೆ ನಂಬಿಕೆ ಇಲ್ಲದಿರುವುದರ ಸಂಕೇತವಷ್ಟೆ. ಎಷ್ಟನ್ನು ತೋರಿಸಬೇಕು, ಎಷ್ಟನ್ನು ಪ್ರೇಕ್ಷಕನ ಮನಸಲ್ಲಿ ಬೆಳೆಯಲು ಬಿಡಬೇಕು ಎಂಬುದರ ಹದ, ಒಂದು ಸಿನಿಮಾದ ಯಶಸ್ಸನ್ನು ನಿರ್ಧರಿಸುವ ಮುಖ್ಯ ಅಂಶಗಳಲ್ಲಿ ಒಂದು. ನಮ್ಮ ಹಲವು ಕಮರ್ಷಿಯಲ್ ಸಿನಿಮಾಗಳಿಗೆ ಕಾಡುವ ಗುಣ ದಕ್ಕದೆ ಇರುವುದು ವಾಚಾಳಿತನದಿಂದಲೇ. ‘ನಾನು ಏನನ್ನೋ ತೋರಿಸುತ್ತಿದ್ದೇನೆ; ನೋಡಿಕೊಂಡು ಎದ್ದು ಹೋಗು. ಅದಕ್ಕಾಗಿ ನೀನೇನೂ ತಲೆ ಖರ್ಚು ಮಾಡಬೇಕಾಗಿಲ್ಲ’ ಎಂಬ ಧೋರಣೆ, ಸಿನಿಮಾವನ್ನು ಆ ಕ್ಷಣದ ರಂಜನೆಯ ಮಟ್ಟಕ್ಕೆ ಇಳಿಸಿಬಿಡುತ್ತದೆ.

‘ನೇಲ್ ಪಾಲಿಶ್’ ಮಧ್ಯದ ಒಂದು ಬಿಂದುವನ್ನು ಕಾಣಿಸಿ ಅದರ ಸುತ್ತಲೂ ನೀವೇ ಕಥೆ ಹೆಣೆದುಕೊಳ್ಳಿ ಎಂದು ಬಿಟ್ಟ ಹಾಗಿರುವ ಕಿರುಚಿತ್ರ. ಇದರ ಕಾಲಾವಧಿ ಮೂರು ನಿಮಿಷಗಳಷ್ಟೆ. ಆದರೆ ಮೂರು ತಾಸಿನ ಸಿನಿಮಾಕ್ಕೂ ಒಗ್ಗಿಸಬಹುದಾದ ಕಥನವೊಂದು ಇಲ್ಲಿ ಮಡುಗಟ್ಟಿರುವುದು ಕಾಣಿಸುತ್ತಿದೆ.

ಹೆಣ್ಣೊಬ್ಬಳು ಬಾತ್‌ರೂಮಿನ ಬಾಗಿಲು ತೆಗೆದು ಹೊರಬರುತ್ತಾಳೆ. ಮೊಣಕಾಲವರೆಗಿನ ಅವಳ ಬೆತ್ತಲೆ ಕಾಲುಗಳು ಕಾಣುತ್ತಿವೆ. ವಿಶೇಷ ಖುಷಿಯಲ್ಲಿ ಇರುವ ಹಾಗೆ ಹಾಡು ಗುನುಗುತ್ತಿದ್ದಾಳೆ. ಹೊರಗಡೆ ಮಳೆ ಬರುತ್ತಿರುವ ಧ್ವನಿ ಕೇಳಿಸುತ್ತಿದೆ. ನಿಧಾನವಾಗಿ ಅವಳು ತನ್ನ ರೂಮಿಗೆ ಹೋಗುತ್ತಾಳೆ. ಅಲ್ಲಿ ಸುತ್ತಿಕೊಂಡಿರುವ ಟವೆಲ್ ಬಿಚ್ಚಿ ಬೇರೆ ಡ್ರೆಸ್ ಹಾಕಿಕೊಳ್ಳುತ್ತಾಳೆ. ಕಾಲಿಗೆ ಗೆಜ್ಜೆ ಕಟ್ಟಿಕೊಳ್ಳುತ್ತಾಳೆ. ಮಂಚದ ಮೇಲೆ ಕೂತು ಕಾಲುಬೆರಳಿಗೆ ನೇಲ್ ಪಾಲಿಶ್ ಹಚ್ಚಿಕೊಳ್ಳಲು ಶುರುಮಾಡುತ್ತಾಳೆ. ಎರಡು ಬೆರಳುಗಳಿಗೆ ಬಣ್ಣ ಹಚ್ಚಿಕೊಳ್ಳುವಷ್ಟರಲ್ಲಿ ಅಡುಗೆ ಮನೆಯಿಂದ ಕುಕ್ಕರ್ ಸೀಟಿ ಕೇಳಿಸುತ್ತದೆ. ಹಾಡು ಗುನುಗುತ್ತಲೇ ಎದ್ದು ಹೋಗಿ ಗ್ಯಾಸ್ ಆಫ್ ಮಾಡಿ ಬಂದು ಮತ್ತೆ ನೇಲ್ ಪಾಲಿಶ್ ಹಚ್ಚಿಕೊಳ್ಳಲು ಶುರುಮಾಡುತ್ತಾಳೆ. ಅಷ್ಟರಲ್ಲಿ ನೇಲ್ ಪಾಲಿಶ್ ಖಾಲಿಯಾಗುತ್ತದೆ. ಮತ್ತೆ ಕೂತಲ್ಲಿಂದ ಏಳುತ್ತಾಳೆ.

ಇಲ್ಲಿಯವರೆಗೆ ಸುಗಮವಾಗಿದ್ದ ವಾತಾವರಣ ಒಮ್ಮೆಲೇ ಬದಲಾಗುವ ಹಾಗೆ ಹಿನ್ನೆಲೆ ಸಂಗೀತ ಜೋರಾಗುತ್ತದೆ. ಅವಳ ಗುನುಗು ಹಾಗೆಯೇ ಇದೆ. ನಿಧಾನವಾಗಿ ನೃತ್ಯದ ಹಾಗೆ ಹೆಜ್ಜೆ ಇಡುತ್ತ ಅವಳು ಬರುವ ಜಾಗದಲ್ಲಿ ಒಂದು ಹೆಣ ಬಿದ್ದಿದೆ. ಅದರ ಎದೆಗೆ ಚೂರಿ ನಾಟಿದೆ. ಪಕ್ಕದಲ್ಲಿ ರಕ್ತ ಹರಿಯುತ್ತಿದೆ. ಅವಳು ಹಾಗೆ ಗುನುಗುತ್ತಲೇ ಬಂದು ಕೂತು ಆ ರಕ್ತದಲ್ಲಿ ಕುಂಚವನ್ನು ಅದ್ದಿ ಕಾಲಿಗೆ ನೇಲ್ ಪಾಲಿಶ್ ರೀತಿ ಹಚ್ಚಿಕೊಳ್ಳಲು ಶುರುಮಾಡುತ್ತಾಳೆ.

ಅಲ್ಲಿಗೆ ಕಿರುಚಿತ್ರ ಮುಗಿಯುತ್ತದೆ; ನಮ್ಮ ಮನಸಲ್ಲಿ ನಿಜವಾಗಲೂ ಚಿತ್ರ ಶುರುವಾಗುವುದು ಪರದೆಯ ಮೇಲೆ ಮುಗಿದಾಗಲೇ. ನೆನಪಿಡಿ: ಇಡೀ ಸಿನಿಮಾದಲ್ಲಿ ಆ ನಿರ್ದೇಶಕ ತೋರಿಸಿರುವುದು ಅವಳ ಕಾಲುಗಳನ್ನು ಮಾತ್ರ. ಅವಳು ಹೇಗಿರಬಹುದು? ಮುಖ ಹೇಗಿರಬಹುದು? ಸುಂದರಿಯಾ? ಕುರೂಪಿಯಾ? ಗೃಹಿಣಿಯಾ, ಹುಡುಗಿಯಾ? ಹೀಗೆ ಹತ್ತು ಹಲವು ದಿಶೆಗಳಲ್ಲಿ ನಮ್ಮ ಮನಸ್ಸು ಹರಿಯುತ್ತಲೇ ಇರುತ್ತದೆ. ಹಾಗೆ ನಾವೇ ನಮ್ಮ ಮನಸೊಳಗೆ ನಮ್ಮಿಷ್ಟದ ಒಂದು ಹೆಣ್ಣಿನ ಚಿತ್ರ ಕಟ್ಟಿಕೊಳ್ಳಬೇಕು ಎಂದೇ ನಿರ್ದೇಶಕ ಬರೀ ಕಾಲನ್ನಷ್ಟೇ ತೋರಿಸಿರುವ ಹಾಗಿದೆ. ಇದು ಬರೀ ಆ ಪಾತ್ರಕ್ಕಷ್ಟೇ ಅನ್ವಯಿಸುವುದಲ್ಲ. ಇಡೀ ಚಿತ್ರ ವಿನ್ಯಾಸಕ್ಕೂ ಅನ್ವಯಿಸುವುದು. ಸತ್ತು ಬಿದ್ದಿರುವವನು ಯಾರು? ಅವಳ ಗಂಡನಾ? ಪ್ರಿಯಕರನಾ? ಕಳ್ಳನಾ? ಅವಳು ಯಾಕೆ ಕೊಂದಳು? ಕೊಂದೂ ಹೇಗೆ ಅಷ್ಟೊಂದು ಸಂತೋಷವಾಗಿರಲು ಸಾಧ್ಯ? ಒಂದು ಹೆಣವನ್ನು ಮನೆಯಲ್ಲಿಟ್ಟುಕೊಂಡು ಅನ್ನ ಬೇಯಿಸುತ್ತಿದ್ದಾಳೆ ಎಂದರೆ ಅವಳ ಮನಸ್ಸು ಹೇಗಿರಬಹುದು? ಆ ಕೊಲೆ ಅವಳಿಗೆ ಅಂಥದೊಂದು ಬಿಡುಗಡೆಯ ಭಾವ ಕೊಟ್ಟಿದೆಯೇ? ಹೀಗೆ ನೂರಾರು ಎಳೆಗಳು ಬಿಚ್ಚಿಕೊಳ್ಳುತ್ತ ನಮ್ಮ ಮನಸೊಳಗೆ ಒಂದು ಸಿನಿಮಾ ತಂತಾನೆಯೇ ಕಟ್ಟಿಕೊಳ್ಳುತ್ತದೆ. ಹಾಗೆ ಕಟ್ಟಿಕೊಳ್ಳುವಂತೆ ಮಾಡುವುದೇ ಈ ಮೂರು ನಿಮಿಷದ ಕಿರುಚಿತ್ರದ ಯಶಸ್ಸು.

**ಹೆಸರು:** ನೇಲ್ ಪಾಲಿಶ್
**ನಿರ್ದೇಶನ/ನಿರ್ಮಾಣ/ಸಂಕಲನ:** ಯಶ್ ಶಾ
**ಕಥೆ:** ಕೃತಾಂತ್ ಬಿಲಾಖಿಯಾ
**ಚಿತ್ರಕಥೆ:** ದಿಶಾ ರಾವ್
**ತಾರಾಗಣ:** ಶಿಪ್ರಾ, ನೇಮಿಲ್

ಈ ಕಿರುಚಿತ್ರ ವೀಕ್ಷಣೆಗೆ bit.ly/2Qm6rSp ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.